ಶ್ರಿ ಎಸ್. ಬಂಗಾರಪ್ಪ.—ನಾನು ಒಂದು ಪಾಯಿಂಟ್ ಹೇಳುತ್ತೇನೆ.

ಅಧ್ಯಕ್ಷರು.—ಪಾಯಿಂಟ್ ಬೇಡ ಏನು ಬೇಡ.

ಶ್ರೀ ಎಂ. ರಘುಪತಿ.—ಯಾವ ವಿದ್ಯಾರ್ಥಿಗಳು ಮೇಟ್‌ನಲ್ಲಿ ಬಂದಿರುತ್ತಾರೋ ಅವರ ಹಾವಳಿ ಇಲ್ಲ. ಹಣ ಕೊಟ್ಟು ಡೊನೇಷನ್ ಮೂಲಕ ಬಂದಿರುತ್ತಾರೋ ಅವರದೇ ಈ ಹಾವಳಿ. ಹೆಚ್ಚಾಗಿ ಹೊರ ರಾಜ್ಯದಿಂದ ಬಂದವರು ಪಾಪಸ್ ಹೋಗಬೇಕು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದವರ ಜೊತೆಯಲ್ಲಿ ಸಹಕಾರ ನೀಡಬೇಕು. ಈ ಮಾತನ್ನು ನಾನು ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಜೊತೆಯಲ್ಲಿ ಹೇಳಿದ್ದೇನೆ, ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಮತ್ತೊಮ್ಮೆ ಸಾಧ್ಯವಿದ್ದರೆ ಮಾಡಬೇಕೆಂದು ಹೇಳಿದ್ದೇನೆ. ಉಪವಾಸ ಸತ್ಯಾಗ್ರಹವನ್ನು ವಿದ್ಯಾರ್ಥಿಗಳು ವಾಪಸ್ ತೆಗೆದುಕೊಂಡು, ತರಗತಿಗಳಿಗೆ ಹಾಜರಾಗಬೇಕೆಂದು ನನ್ನ ಮನವಿ.

ಶ್ರೀ ಎಸ್. ಬಂಗಾರಪ್ಪ.—ನನ್ನ ಒಂದು ಹೇಳಿಕೆ ಏನೆಂದರೆ ಆ ವಿದ್ಯಾರ್ಥಿಗಳು ನನ್ನ ಹತ್ತಿರ ಬಂದಿದ್ದರು. ಅಮರಣಾಂತ ಉಪವಾಸ ಸತ್ಯಾಗ್ರಹದಿಂದ ಆರೇಳು ಜನ ವಿದ್ಯಾರ್ಥಿಗಳು ಅಡ್ಮಿಟ್ ಆಗಿದ್ದಾರೆ. ನಿಮ್ಮ ಒಬ್ಬ ಆಫೀಸರನ್ನು ಅವರ ಹತ್ತಿರ ಕಳುಹಿಸಿ, ಅವರ ಜೊತೆ ಕುಳಿತುಕೊಂಡು ಮಾತನಾಡಿ ಅವರಿಗೆ ಕನ್‌ವಿನ್ಸ್ ಮಾಡಲಿ. ಏನಾದರೂ ಒಂದು ಮಾಡಬೇಕಲ್ಲ ರಘುಪತಿಯವರೇ. ಅವರಿನ್ನೂ ವಿದ್ಯಾರ್ಥಿಗಳು, ಅದಕ್ಕೋಸ್ಕರ ಏನಾದರೂ ಮಾಡಬೇಕು.

ಶ್ರೀ ಎಂ. ರಘುಪತಿ.—ನಾನು ತಕ್ಷಣವೇ ವಿದ್ಯಾರ್ಥಿಗಳನ್ನು ನೋಡಿ ಮಾತನಾಡುವಂತೆ ರಿಜಿಸ್ಟ್ರಾರ್‌ರವರಿಗೆ ಹೇಳಿದ್ದೇನೆ.

ಶಾಸನ ರಚನೆ ಕಾರ್ಯಕಲಾಪಗಳು

Karnataka Land Revenue (Second Amendment) Bill 1986. (Leave to Introduce)

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿ).—ಇವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—"೧೯೮೬ನೇ ಇಸವಿಯ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ)ವಿಧೇಯಕವನ್ನು ಮಂಡಿಸಲು ಅನುಮತಿ ಕೋರುತ್ತೇನೆ."

ಮಾನ್ಯ ಅಧ್ಯಕ್ಷರು.—ಪ್ರಸ್ತಾಪವೇನೆಂದರೆ –"೧೯೮೬ ನೇ ಇಸವಿಯ ಕರ್ನಾಟಕ ಭೂ ಕಂದಾಯ (ಎರಡನೆ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

(ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ಮಂಡಿಸಲು ಅನುಮತಿಯನ್ನು ನೀಡಲಾಯಿತು)

ಶ್ರೀ ಎ. ಲಕ್ಷ್ಮೀಸಾಗರ್ (ಶ್ರೀ ಎಸ್. ಆರ್. ಬೊಮ್ಮಾಯಿ ಕಂದಾಯ ಹಾಗೂ ಯೋಜನಾ ಮಂತ್ರಿಗಳವರ ಪರವಾಗಿ).—೧೯೮೬ನೇ ಇಸವಿಯ ಕರ್ನಾಟಕ ಭೂ ಕಂದಾಯ (ಎರಡನೆ ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತೇನೆ.

* ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಯಿತು.

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ.

†ಶ್ರಿ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೇ, ಈ ವರ್ಷದ ಬಜೆಟ್ ಪೂರ್ಣವಾಗಿ ರೈತರ ಮತ್ತು ಗ್ರಾಮೀಣ ಜನತೆಯ ಜ್ಯೋತಿ ದೀಪವಾಗಿದೆ. ಇದು ಕಾರ್ಯಗತವಾದಲ್ಲಿ ಇಡೀ ನಮ್ಮ

---

* Annexure

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.